ಒನ್ ಮಿನಿಟ್

# ಪಾನಿಪುರಿ ವಿತ್ ಮುರಳಿ



ಈಗಾಗಲೇ ತಮ್ಮ ಅಡುಗೆ ಶೋ ಮೂಲಕ ಜನಪ್ರಿಯರಾಗಿರುವ ಮುರಳಿ ಮತ್ತೊಂದು ವಿಶಿಷ್ಟ ಶೋ ನಿರೂಪಿಸುತ್ತಿದ್ದಾರೆ. ಕಲ್ಕಿ ಕನ್ನಡ ವಾಹಿನಿಯಲ್ಲಿ ಅವರ 'ಪಾನಿಪುರಿ ವಿತ್ ಮುರಳಿ' ಮೂಡಿಬರಲಿದೆ. ಕಾರ್ಯಕ್ರಮದಲ್ಲಿ ಮುರಳಿ ಕಿರುತೆರೆ ಮತ್ತು ಹಿರಿತೆರೆಯ ಖ್ಯಾತನಾಮರೊಂದಿಗೆ ಹರಟೆ ಹೊಡೆಯಲಿದ್ದಾರೆ. ಲಘು ಹರಟೆಯೊಂದಿಗೆ ಖ್ಯಾತನಾಮರ ಸಾಧನೆ–ಬದುಕಿನ ಮೇಲೆ ಬೆಳಕು ಚೆಲ್ಲುವ ಪ್ರಯತ್ನವಿದು. ನೇರಪ್ರಸಾರದ ಈ ಕಾರ್ಯಕ್ರಮದಲ್ಲಿ ವೀಕ್ಷಕರು ಫೋನ್ ಕರೆ ಮಾಡಿ ನಿರೂಪಕರು ಹಾಗೂ ಅತಿಥಿಗಳೊಂದಿಗೆ ಮಾತನಾಡಬಹುದು. ಕನ್ನಡ ಕಿರುತೆರೆಗೆ ಹೊಸದಾಗಿ ಸೇರ್ಪಡೆಯಾಗಿರುವ 'ಕಲ್ಕಿ ಕನ್ನಡ' ಮನರಂಜನಾ ವಾಹಿನಿ ಹಲವಾರು ನೂತನ ಕಾರ್ಯಕ್ರಮಗಳೊಂದಿಗೆ ನೆಲೆ ಕಂಡುಕೊಳ್ಳುವ ಹಾದಿಯಲ್ಲಿದೆ. 'ಮಾಧ್ಯಮ ಎಂದ ತಕ್ಷಣ ಎಲ್ಲರೂ ಯೋಚಿಸೋದು ಹೊಸತನ...ಹೊಸ ಯೋಚನೆ ಹಾಗೂ ಭಿನ್ನ ಮನರಂಜನೆ. ಇಂತಹ ಮನರಂಜನೆ ಕಾರ್ಯಕ್ರಮಗಳನ್ನು ವೀಕ್ಷಕರಿಗೆ ನೀಡುವುದು ನಮ್ಮ ಮುಖ್ಯ ಗುರಿಯಾಗಿದೆ. ಕುಟುಂಬ ಸಮೇತರಾಗಿ ನೋಡುವಂತಹ ಅಮೂಲ್ಯತನದ ರಿಯಾಲಿಟಿ ಶೋಗಳು, ಮನ ಮಿಡಿಯುವ ಧಾರವಾಹಿಗಳು ನಿಮ್ಮ ಮನೆಗೆ ಬರಲಿವೆ' ಎಂದು ವಾಹಿನಿ ಮೂಲಗಳು ಹೇಳುತ್ತವೆ. 'ಪಾನಿಪುರಿ ವಿತ್ ಮುರಳಿ' ಸೋಮವಾರದಿಂದ ಶುಕ್ರವಾರದವರೆಗೆ ಪ್ರತಿ ದಿನ ಸಂಜೆ 5ಕ್ಕೆ ಮೂಡಿಬರಲಿದೆ.